ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣರವರು ನಿಯಮ-72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಸರ್ಕಾರದ ಉತ್ತರ.

ವಿಷಯ:

ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರಿಗೆ ಸರ್ಕಾರದ ಆದೇಶದಂತೆ ವಿವಿಧ ಇಲಾಖೆಗಳಿಂದ ಆಪ್ತ ಸಹಾಯಕರುಗಳಾಗಿ ನೇಮಕವಾಗಿರುವ ನೌಕರರಿಗೆ 2019ರ ನವೆಂಬರ್ ತಿಂಗಳಿನಿಂದ ವೇತನ ಪಾವತಿ ಆಗಿರುವುದಿಲ್ಲ. ಆಪ್ತ ಸಹಾಯಕರುಗಳಾಗಿ ನೇಮಕವಾಗಿರುವ ಸಿಬ್ಬಂದಿ ವರ್ಗದವರಿಗೆ ಕಂದಾಯ ಇಲಾಖೆಯ ತಹಶೀಲ್ದಾರ್ ರವರ ಕಛೇರಿಯಲ್ಲಿ ವೇತನವನ್ನು ಪಾವತಿ ಮಾಡುತ್ತಿದ್ದು, ಸದರಿ ಸಿಬ್ಬಂದಿ ವರ್ಗದವರಿಗೆ ಆರ್ಥಿಕ ಇಲಾಖೆಯಿಂದ ಹಣ ಬಿಡುಗಡೆಯಾಗಲಿಲ್ಲವೆಂದು ಕಾರಣ ನೀಡಿ ಪ್ರತಿ ತಿಂಗಳು ಸಹ ನಿಗದಿತ ಸಮಯಕ್ಕೆ ವೇತನ ಬಿಡುಗಡೆಯಾಗದೆ ವಿಳಂಬವಾಗುತ್ತಿರುವ ಕುರಿತು.

ಉತ್ತರ:

ಮಾನ್ಯ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳ ಆಪ್ತ ಸಹಾಯಕರುಗಳಾಗಿ ಸರ್ಕಾರದ ಆದೇಶದಂತೆ ವಿವಿಧ ಇಲಾಖೆಗಳಿಂದ ನೇಮಕಗೊಂಡಿರುವ ನೌಕರರಿಗೆ 2019-20ನೇ ಸಾಲಿನ ಆರ್ಥಿಕ ವರ್ಷದಲ್ಲಿ ಪ್ರಧಾನ ಲೆಕ್ಕ ಶೀರ್ಷಿಕೆ 2011-ಸಂಸತ್/ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ವಿಧಾನಮಂಡಲಗಳು ಅಡಿಯಲ್ಲಿ ಲೆಕ್ಕ ಶೀರ್ಷಿಕೆ 2011-02-101-0-09 ವಿಧಾನಸಭಾ ಸದಸ್ಯರುಗಳಿಗೆ ಆಪ್ತ ಸಹಾಯಕರು -002 ವೇತನ - ಅಧಿಕಾರಿಗಳು ಮತ್ತು ಇತರೆ ಉಪ ಶೀರ್ಷಿಕೆ ಹಾಗೂ ಲೆಕ್ಕ ಶೀರ್ಷಿಕೆ 2011-02-102-0-09 ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಆಪ್ತ ಸಹಾಯಕರು - 002 ವೇತನ - ಅಧಿಕಾರಿಗಳು ಮತ್ತು ಇತರೆ ಉಪ ಶೀರ್ಷಿಕೆಗಳು ಅಡಿಯಲ್ಲಿ ವೇತನ ಮತ್ತು ಇತರೆ ಭತ್ಯೆಗಳನ್ನು ನೀಡಲಾಗುತ್ತಿದೆ. ಸದರಿ ಲೆಕ್ಕ ಶೀರ್ಷಿಕೆಗಳಲ್ಲಿ ಈ ಬಾಬ್ತು ಕ್ರಮವಾಗಿ ರೂ.464.00 ಲಕ್ಷಗಳು ಹಾಗೂ ರೂ.183.00 ಲಕ್ಷಗಳನ್ನು ಆಯವ್ಯಯದ ಮೂಲಕ ನಿಗದಿಗೊಳಿಸಲಾಗಿದೆ.

ಅದರಂತೆ, ಸದರಿ ಆಪ್ತ ಸಹಾಯಕರ ವೇತನ ಮತ್ತು ಇತರೆ ಭತ್ಯೆಗಳನ್ನು ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ(HRMS)ಯಲ್ಲಿ ಕರ್ತವ್ಯನಿರತ ಆಪ್ತ ಸಹಾಯಕರ ಸಂಖ್ಯೆಗನುಗುಣವಾಗಿ ಪ್ರತಿ ಮಾಹೆಯ ಮೊದಲ ವಾರದೊಳಗಾಗಿ ಪಾವತಿಸಲಾಗುತ್ತದೆ.

ಮೇಲಿನಂತೆ ವೇತನ/ಭತ್ಯೆಗಳನ್ನು ನಿಗದಿಗೊಳಿಸಲಾಗಿರುವ ಮಾನ್ಯ ವಿಧಾನಸಭಾ ಸದಸ್ಯರುಗಳ ಹಾಗೂ ವಿಧಾನ ಪರಿಷತ್ತಿನ ಸದಸ್ಯರುಗಳ ಆಪ್ತ ಸಹಾಯಕರುಗಳಿಗೆ ವೇತನ ಮತ್ತು ಇತರೆ ಭತ್ಯೆಗಳನ್ನು ಖಜಾನೆಯಿಂದ ಸೆಳೆದು ಪಾವತಿಸುವ ಪ್ರಾಧಿಕಾರ ಕಂದಾಯ ಇಲಾಖೆಯಾಗಿದ್ದು (Drawing & Disbursing Authority) ಅದರನ್ವಯ ವೇತನವನ್ನು ಮ್ಯಾಪಿಂಗ್ ಮಾಡಿ, ಖಜಾನೆ-2 ರ ಮೂಲಕ ವೇತನ ಪಾವತಿಸಲಾಗುತ್ತಿದೆ. ಈ ಹಿಂದೆ ವೇತನವನ್ನು ಖಜಾನೆ-1 ರಲ್ಲಿ ಪಾವತಿಸಲಾಗುತ್ತಿತ್ತು. ಪ್ರಸ್ತುತ ಖಜಾನೆ-2 ಅನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಿ ಆ ಮೂಲಕ ವೇತನ ಪಾವತಿಸುತ್ತಿರುವ ಕಾರಣ ಪ್ರಾರಂಭದಲ್ಲಿ ಕೆಲವೊಂದು ತಾಂತ್ರಿಕ ಸಮಸ್ಯೆಗಳು ಉಂಟಾಗಿ ಸದರಿ ಆಪ್ತ ಸಹಾಯಕರ ವೇತನ ಪಾವತಿಯಲ್ಲಿ ಸ್ವಲ್ಪ ವಿಳಂಬವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ದಿನಾಂಕ: 01.02.2020ರಂದು ಆರ್ಥಿಕ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗಿದ್ದು, ಆರ್ಥಿಕ ಇಲಾಖೆಯ ಖಜಾನೆ-2, ಕಂದಾಯ ಇಲಾಖೆ, ಖಜಾನೆ ನಿರ್ದೇಶನಾಲಯ ಹಾಗೂ ಕರ್ನಾಟಕ ವಿಧಾನ ಮಂಡಲದ ಇಲಾಖಾ ಮುಖ್ಯಸ್ಥರೊಂದಿಗೆ ನಡೆದ ಸದರಿ ಸಭೆಯಲ್ಲಿ ಈ ಬಗ್ಗೆ ಸುಧೀರ್ಘ ಚರ್ಚೆ ನಡೆದು ಉಂಟಾಗಿರುವ ತಾಂತ್ರಿಕ ಸಮಸ್ಯೆಯ ಬಗ್ಗೆ ಕೂಲಂಕಷವಾಗಿ ಚರ್ಚಿಸಿ, ಇನ್ನು ಮುಂದೆ ವೇತನ ಮತ್ತು ಇತರೆ ಭತ್ಯೆಗಳ ಬಿಡುಗಡೆಗೆ ಯಾವುದೇ ಸಮಸ್ಯೆ ಉಂಟಾಗದಂತೆ ತೀರ್ಮಾನ ಕೈ ಗೊಂಡು ಅದರಂತೆ ಕ್ರಮವಹಿಸುವಂತೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಪ್ರಾಧಿಕಾರಗಳಿಗೆ ನಿರ್ದೇಶನ ನೀಡಲಾಗಿದೆ.

ಪ್ರಸ್ತುತ ವೇತನ ಮತ್ತು ಇತರೆ ಭತ್ಯೆಗಳ ಬಿಡುಗಡೆ ಬಗ್ಗೆ ಹಣ ಬಿಡುಗಡೆ ಪ್ರಾಧಿಕಾರವಾದ ಕಂದಾಯ ಇಲಾಖೆಯು ಖಜಾನೆ-2ರಲ್ಲಿ ಅವಶ್ಯಕ ಮೊತ್ತವನ್ನು ಅಪ್ ಲೋಡ್ ಮಾಡಿ ವೇತನ ಬಿಡುಗಡೆ ಮಾಡಿರುತ್ತದೆ. ಅದ್ದರಿಂದ ಪ್ರಸ್ತುತ ಯಾವುದೇ ಸಮಸ್ಯೆಗಳು ಕಂಡು ಬರುತ್ತಿಲ್ಲ.

ಸಂಖ್ಯೆ: ಆಇ 101 ವೆಚ್ಚ-7/2020

(ಬಿ.ಎಸ್.ಯಡಿಯೂರಪ್ಪ)

ಮುಖ್ಯಮಂತ್ರಿ